ಉಳಿದಾವ್ರೆಲ್ಲಾ ಮುಂದಿನ ಹಾಲಿಗೆ ಊಟಕ್ಕ ಹೋಗ್ರಿ' ಎಂದು ಕೂಗಿದರು.

ಒಳ್ಳೆಯ ಊಟವಾಯಿತು. ನನಗೆ ಅಮ್ಮನ ಅಡಿಗೆಯ ನೆನಪಾಗಿತ್ತು. ಅನ್ನ, ಹುಳಿ, ರವೆ ಪಾಯಸ, ಪೂರಿ, ಬಾಸುಂದಿ, ಪಲ್ಯ, ಚಟ್ನಿ, ಕೋಸಂಬರಿಗಳೊಂದಿಗೆ ಹಾಗಲಕಾಯಿಯ ಕಾಯಿರಸ, ಉದ್ದಿನ ವಡೆಗಳು ಮತ್ತೆ ಮತ್ತೆ ಬೆರಳು ಚೀಪುವಂತಿದ್ದವು. ಕೈತೊಳೆದು ಬಂದಾಗ ಚಿಗುರೆಲೆಯೊಂದಿಗೆ ಬಣ್ಣದ ಅಡಿಕೆ ಪುಡಿ ಸ್ವಾಗತಿಸಿತು. ಮುಖ ಸಿಂಡರಿಸಿದೆ. ಇಷ್ಟು ಒಳ್ಳೆಯ ಊಟಕ್ಕೆ ಒಳ್ಳೆಯ ಅಡಿಕೆ ಇದ್ದಿದ್ದರೆ... ಎಂದು ಬಾಯಿಗಿಟ್ಟುಕೊಳ್ಳಲು ಮೀನ ಮೇಷ ಎಣಿಸುತ್ತಿದ್ದಾಗಲೇ ಸುಶೀಲಾ ವೈನಿ ಬಂದು ತಮ್ಮ ಅಡಿಕೆ ಪುಡಿಯ ಡಬ್ಬಿ ಮುಂದೆ ಹಿಡಿದರು. ಅಪ್ರಯತ್ನವಾಗೇ ಮುಖ ಅರಳಿತು. 'ನಮ್ಮ ಅಡಿಕಿ ಹಾಕ್ಕೊಂಡಾಗನ ಊಟಾ ಮಾಡಿದ ತೃಪ್ತಿ ಸಿಗೋದು' ಎಂದರು. 'ಅಗದಿ ಖರೇರಿ' ಎನ್ನುತ್ತ ಅಡಿಕೆ ತೆಗೆದುಕೊಂಡೆ. 'ವಿಡಾ ಮಾಡಿಕೊಡ್ಲೇನು?' ಎಂದಾಗ 'ಬ್ಯಾಡ್ರಿ' ಎನ್ನುತ್ತ ಬೆರಳ ತುದಿಯಿಂದ ಸುಣ್ಣ ಒರೆಸಿ ಎಲೆ ಅಡಿಕೆ ಮಡಚಿಕೊಂಡು ಬಾಯಿಗಿಟ್ಟುಕೊಂಡೆ.

'ಮೋಹನ ಅಣ್ಣಾ...' ಎನ್ನುವಷ್ಟರಲ್ಲೇ 'ಅವರು ಊಟಾ ಮಾಡಿ ರೂಮ್ ಕಡೆ ಹೋಗಿಬಿಟ್ಟಾರ ನೋಡು. ಆಗಲೇ ಮಲಕೊಂಡಿರಬೇಕು' ಎಂದರು. 'ಪದ್ಮಾಕಾಕು ಹೆಂಗಿದ್ದಾರ?' ಎಂದು ಕೇಳಿದೆ. 'ಆರಾಮಿದ್ದಾರಪಾ. ಇಬ್ಬರು ಮಕ್ಕಳನ್ನ ಕಳಕೊಂಡು ನೊಂದ ಜೀವ. ಎಲ್ಲೆ ಇರ್ತಾರ ಅಲ್ಲೆ ಹ್ಞೂಂ ಅಂತೇವಿ. ಐದು ವರ್ಷದ ಕೆಳಗ ನಮ್ಮ ಆಳು ಸೋಮಣ್ಣನ್ನ ಜೋಡಿ ಕಳಸಿ ಕಾಶಿಯಾತ್ರಾ ಮಾಡಸೇವಿ. ಮಗಳ ಮನಿಕಿಂತಾ ಹೆಚ್ಚು ಸ್ವಾದಿವಳಗ ಇರ್ತೇನಂತಾರ. ಅಲ್ಲೆ ಖೋಲಿ ತೊಗೊಂಡು ಅಡಿಗಿಗೆ ಆಳು ಇಟಗೊಂಡು ತಿಂಗಳಾನುಗಟ್ಟಲೆ ಇರತಾರ. ಒಟ್ಟನ್ಯಾಗ ಆರಾಮ ಇದ್ದಾರ. ಆದ್ರ ಹಣ್ಣಾಗ್ಯಾರ' ಎಂದರು.''

'ಗೋದಾಕಾಕು ಹೆಂಗಿದ್ದಾರ?' ಎಂದು ಕೇಳುವಷ್ಟರಲ್ಲೇ 'ಸುಶೀಲಾಬಾಯಿ ಜೋಶಿ' ಎಂಬ ಕೂಗು ಕೇಳಿಬಂತು. 'ಆರಾಮಿದ್ದಾರ... ಧಾರವಾಡದಾಗ ಅಣ್ಣಾನ ಮನ್ಯಾಗ ಹೆಚ್ಚು ಇರ್ತಾರ. ಬಿ.ಪಿ., ಶುಗರ್‌ಗೊಳ ಜೋಡಿ ಗುದ್ಯಾಡಕೋಂತ...' ಎಂದು ಹೇಳುತ್ತಲೇ, 'ಆತಪಾ... ಬರ್ತೇನಿ. ಊರು ಬಿಟ್ಟೇವಿ. ಅಲ್ಲೆ ಯಾರಿಲ್ಲ ಅನಬ್ಯಾಡ್ರಿ. ನಾವಿದ್ದೇವಿ. ಆವಾಗಾವಾಗ ಬಂದು ಹೋಗ್ರಿ' ಎಂದು ಹೇಳಿದ್ದೇ ಕೈ ಬೀಸಿದರು. ನಾನೂ ಕೈ ಬೀಸಿದೆ... ಬೀಸುತ್ತಲೇ ಇದ್ದೆ. ಅಚ್ಯುತನ ನೆನಪಾಗಿತ್ತಲ್ಲ... ಗಾಯ ಕೆದಕಿದಂತಾಗಿತ್ತು. ಹೌದು... ಅಂಥಿಂಥ ಗಾಯವಲ್ಲ. ಮಾಯದ ಗಾಯ. ಪ್ರಾಣ ಸ್ನೇಹಿತನ ಅಗಲಿಕೆ ತುಂಬಲಾರದ ನಷ್ಟವಾಗಿತ್ತು.

ನಮ್ಮೂರು ಅಥಣಿಯ ಬಳಿ ಶಿರಹಟ್ಟಿ ಎಂಬ ಪುಟ್ಟ ಹಳ್ಳಿ. ಹಾಲು, ಮೊಸರು ಸಮೃದ್ಧವಾಗಿದ್ದತ್ತು. ಕೃಷ್ಣೆ ಒಮ್ಮೆ ಶಾಂತವಾಗಿ ಮತ್ತೊಮ್ಮೆ ರಭಸವಾಗಿ ಹರಿದು ಅಲ್ಲಲ್ಲಿ ಸುಳಿಗಳಿಂದೊಡಗೂಡಿ ವೈಯ್ಯಾರವಾಗಿ ನರ್ತಿಸುತ್ತಿದ್ದಳು. ಹೊಳೆ ದಾಟಿದರೆ ಆ ಬದಿಯಲ್ಲಿ ಜಮಖಂಡಿ. ನಾನು ಹುಟ್ಟುವ ಮೊದಲೇ ನಮ್ಮವ್ವ ಗೋದಾವರಿ ಮತ್ತು ಅಚ್ಯುತನ ತಾಯಿ ಪದ್ಮಾವತಿಯ ಗೆಳೆತನ ಆರಂಭವಾಗಿತ್ತು. ಮಾಧವರಾಯರು ಮತ್ತು ಪದ್ಮಾವತಿಯವರದು ಶಿರಹಟ್ಟಿಯಲ್ಲೇ ಹೆಸರುವಾಸಿಯಾದ ಜೋಶಿ ಮನೆತನ. ಲಾಗಾಯ್ತಿನಿಂದ ಬಂದ ಜಮೀನುದಾರಿಕೆಯನ್ನು ಮಾಧವರಾಯರು ಚೆನ್ನಾಗಿಯೇ ಮುಂದುವರೆಸಿಕೊಂಡು ಬಂದಿದ್ದರು. ಪದ್ಮಾವತಿಯ ಮೈಮೇಲೆ ಜೋಡಗೋಟು, ಪಾಟ್ಲಿ, ಬಿಲ್ವಾರ, ತೋಡೆಗಳ ಮಧ್ಯೆ ಹಸಿರು ಬಳೆಗಳು ಕಿಣಿಕಿಣಿ ಸದ್ದು ಮಾಡುತ್ತಿದ್ದವು. ಕೊರಳಲ್ಲಿ ಮಾಂಗಲ್ಯದೊಂದಿಗೆ ಗುಂಡಿನ ಸರ, ಐದೆಳೆ ಅವಲಕ್ಕಿ ಸರ ಹೊಳೆಯುತ್ತಿತ್ತು. ದೊಡ್ಡ ಮಗಳನ್ನು ಬಾಗಲಕೋಟೆಗೆ ಮದುವೆ ಮಾಡಿ ಕೊಟ್ಟಿದ್ದರು. ನಮ್ಮದು ಕುಚೇಲನ ಮನೆ. ಅಪ್ಪ ತಾಲೂಕು ಕಚೇರಿಯಲ್ಲಿ ಗುಮಾಸ್ತೆ. ಶುದ್ಧ ಹಸ್ತದವ. ತರುವುದಕ್ಕೂ ತಿನ್ನುವುದಕ್ಕೂ ಸರಿಹೋಗುತ್ತಿತ್ತು. ಅಮ್ಮನ ಕೈಯಲ್ಲಿ ಹಸಿರು ಬಳೆಗಳೊಂದಿಗೆ ಬರಿ ಪಾಟ್ಲಿ, ಬಿಲ್ವಾರಗಳಷ್ಟೇ. 'ಮಕ್ಕಳು ಸಣ್ಣು ಅವ. ಈಗ ಸಂಸಾರದಾಗ ಕಾಟಕಸರಿ ಮಾಡಿ ಒಂದಿಷ್ಟು ಬಂಗಾರ ಮಾಡಿಸಿಗೊ ಗೋದಾ' ಎಂದು ಪದ್ದಕ್ಕ ಹೇಳಿದರೆ, 'ಎಲ್ಲೀದ ಪದ್ದಕ್ಕ... ನೌಕರದಾರ ಮಂದಿ. ಹಾಸಲಿಕ್ಕಿದ್ರ ಹೊದಿಲಿಕ್ಕಿಲ್ಲ ಅನ್ನೋ ಪರಿಸ್ಥಿತಿ. ಐದು ಮಕ್ಕಳ ನಡುವ ಇದ್ದದ್ದಷ್ಟ ಇಟಗೊಂಡರ ಸಾಕು' ಎನ್ನುತ್ತಿದ್ದ ಅವ್ವ ಭಾರವಾದ ನಿಟ್ಟುಸಿರು ಬಿಡುತ್ತಿದ್ದಳು. ಆದರೂ ಇಬ್ಬರೂ ಸೇರಿ ಶೂರ್ಪಾಲಿ ನರಸಪ್ಪನಿಗೆ ಹೋಗಿ ಬರುವುದಿತ್ತು. ಮತ್ತೂರು ಮಹಾಲಕ್ಷ್ಮಿಗೆ ಕೈ ಮುಗಿಯುವುದಿತ್ತು. ಇಬ್ಬರೂ ಸೇರಿ ಲಂಗೋಟಿ ಕಟ್ಟುವಾಗಲೇ ನಮ್ಮ ಗೆಳೆತನ ಮಾಡಿಸಿಬಿಟ್ಟಿದ್ದರು.